*

# ಶಾಂಕರ ಭಾಷ್ಯಾನುಸಾರಿ ಚತುಸ್ಸೂತ್ರೀ ವಿವರಣಮ್-2

(ಶಂಕರಭಾಷ್ಯದಲ್ಲಿರುವಂತೆ ಚತುಸ್ಸೂತ್ರಗಳ ವಿವರಣೆ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ಹರ್ಷಾನಂದ

## ೩. ಶಾಸ್ತ್ರಯೋನಿತ್ವಾಧಿಕರಣಮ್

ಶಾಸ್ತ್ರಯೋನಿತ್ವಾತ್ ॥ ೩ ॥

೩. ಶಾಸ್ತ್ರಗಳಿಗೆ ಕಾರಣವಾಗಿರುವುದರಿಂದಲೂ (ಬ್ರಹ್ಮವು ಸರ್ವಜ್ಞ).

**ಪರಮಾದ್ಭುತಸ್ಯ ಅತೀವವಿಚಿತ್ರಸ್ಯ ಏತಸ್ಯ ಜಗತಃ ಸೃಷ್ಟಿಕರ್ತಾ ಸರ್ವಜ್ಞಃ ಸರ್ವಶಕ್ತಶ್ಚ ಏವ ಭವಿತುಮರ್ಹತಿ ನಾನ್ಯಥಾ । ಏತತ್ ಪೂರ್ವಸೂತ್ರೇಣ ಪ್ರತಿಜ್ಞಾತಂ ಭವತಿ । ಅಧುನಾ ತಸ್ಯ ಬ್ರಹ್ಮಣಃ ಜ್ಞಾನೋಪಾಯಂ ಸೂಚಯತಿ ಶಾಸ್ತ್ರೇತಿ । ವೇದಾಂತಶಾಸ್ತ್ರೈಕ-ಯೋನಿತ್ವಾದಿತಿ ಯಾವತ್ । ಶಾಸ್ತ್ರಂ ಯೋನಿಃ ಪ್ರಮಾಣಂ ಯಸ್ಯ ತಚ್ಛಾಸ್ತ್ರಯೋನಿ । ಯಸ್ಮಾದ್‌ವೇದಾಂತ ಶಾಸ್ತ್ರಮೇವ ಬ್ರಹ್ಮಣಃ ಪರಮಮ್ ಏಕಮಾತ್ರಂ ಪ್ರಮಾಣಂ ತಸ್ಮಾದ್ ಬ್ರಹ್ಮಜಿಜ್ಞಾಸುಭಿಃ ವೇದಾಂತಶಾಸ್ತ್ರಮ್ ಆಶ್ರಯಣೀಯಮ್। ತಚ್ಛಾಸ್ತ್ರಜ್ಞಾನಂ ತು ವಿನಾ ಗುರುಂ ನ ಸೇತ್ಸ್ಯತಿ । ಇತ್ಯತಃ ಗುರೂಪಸದನಾದಿಪೂರ್ವಕಂ ವೇದಾಂತಶಾಸ್ತ್ರಂ ಜ್ಞಾತ್ವಾ ಮೋಕ್ಷಂ ಪ್ರಾಪ್ನುಯಾದಿತಿ ಅವಗಂತವ್ಯಮ್ ।**

**ಅಥವಾ ಪರಂ ಬ್ರಹ್ಮ ಶಾಸ್ತ್ರಸ್ಯ ಯೋನಿಃ ಉಗಮಸ್ಥಾನಮ್ ಇತ್ಯಪಿ ಭವೇತ್। 'ಅಸ್ಯ ಮಹತೋ ಭೂತಸ್ಯ ನಿಶ್ವಸಿತಮ್ ಏತದ್ ಯದೃಗ್ವೇದಃ' (ಬೃಹದಾರಣ್ಯಕೋಪನಿಷತ್ ೨.೪.೧೦) ಇತಿ ಶ್ರುತೇಃ ।**

**ಪ್ರಥಮಸೂತ್ರೇ ಬ್ರಹ್ಮಜಿಜ್ಞಾಸಾಯಾಃ ಕರ್ತವ್ಯತ್ವಂ, ದ್ವಿತೀಯೇ ತದ್ಬ್ರಹ್ಮಣಃ ಲಕ್ಷಣಮ್, ಏತಸ್ಮಿನ್ ತೃತೀಯೇ ಪ್ರಮಾಣವಿಷಯಶ್ಚ ಉಕ್ತಾ ಇತಿ ಮಂತವ್ಯಮ್ ॥**

ಪರಮಾದ್ಭುತವೂ ಅತ್ಯಂತ ವಿಚಿತ್ರವೂ ಆದ ಈ ಜಗತ್ತಿನ ಸೃಷ್ಟಿಕರ್ತನು ಸರ್ವಜ್ಞನೂ ಸರ್ವಶಕ್ತನೂ ಆಗಲೇಬೇಕೇ ಹೊರತು ಬೇರೆಯಲ್ಲ. ಇದನ್ನು ಹಿಂದಿನ ಸೂತ್ರದಲ್ಲಿಯೇ ತಿಳಿಸಲಾಗಿದೆ. ಈಗ 'ಶಾಸ್ತ್ರಯೋನಿ..' ಎಂಬ ಪದದಿಂದ ಆ ಬ್ರಹ್ಮದ ಜ್ಞಾನವನ್ನು ಪಡೆಯುವ ಉಪಾಯವನ್ನು ಸೂಚಿಸುತ್ತಿದ್ದಾರೆ. ವೇದಾಂತ ಶಾಸ್ತ್ರವೊಂದೇ (ಆ ಬ್ರಹ್ಮವನ್ನರಿಯಲು) ಮೂಲ ಪ್ರಮಾಣ ಎಂದಭಿಪ್ರಾಯ. ಶಾಸ್ತ್ರವು ಯಾವುದಕ್ಕೆ ಯೋನಿಯೋ ಪ್ರಮಾಣವೋ ಅದು ಶಾಸ್ತ್ರಯೋನಿ. ಯಾವ ಕಾರಣದಿಂದ ವೇದಾಂತಶಾಸ್ತ್ರವೊಂದೇ ಬ್ರಹ್ಮವಸ್ತುವಿಗೆ ಏಕಮಾತ್ರ ಮತ್ತು ಪರಮ ಪ್ರಮಾಣವೋ ಆ ಕಾರಣದಿಂದ ಬ್ರಹ್ಮವನ್ನರಿಯಲು ಇಚ್ಛಿಸುವವರು ವೇದಾಂತಶಾಸ್ತ್ರವನ್ನು ಆಶ್ರಯಿಸಬೇಕು. ಆ ಜ್ಞಾನವಾದರೋ ಗುರುಕೃಪೆಯಿಲ್ಲದೆ ಸಿದ್ಧಿಸುವುದಿಲ್ಲ. ಆದುದರಿಂದ ಗುರುವನ್ನು ಬಳಿಸಾರುವುದರ ಮೂಲಕ ವೇದಾಂತ ಶಾಸ್ತ್ರವನ್ನರಿತು ಮೋಕ್ಷವನ್ನು ಪಡೆಯಬೇಕು ಎಂದು ತಿಳಿಯಬೇಕು.

ಅಥವಾ ಪರಬ್ರಹ್ಮವು ಶಾಸ್ತ್ರಕ್ಕೆ ಯೋನಿ ಅಥವಾ ಉಗಮ ಸ್ಥಾನ ಎಂದೂ ಆಗಬಹುದು. 'ಈ ಋಗ್ವೇದಾದಿಗಳು ಈ ಮಹತ್ ಪರವಸ್ತುವಿನ ನಿಶ್ವಾಸವು' ಎಂಬ ಶ್ರುತಿವಾಕ್ಯದಿಂದ (ಬೃಹದಾರಣ್ಯಕೋಪನಿಷತ್ ೨.೪.೧೦) ಹೀಗೆ ತಿಳಿದುಬರುತ್ತದೆ.

ಮೊದಲನೆಯ ಸೂತ್ರದಲ್ಲಿ ಬ್ರಹ್ಮಜಿಜ್ಞಾಸೆಯು ಕರ್ತವ್ಯವೆಂದೂ, ಎರಡನೆಯ ಸೂತ್ರದಲ್ಲಿ ಆ ಬ್ರಹ್ಮದ ಲಕ್ಷಣವನ್ನು ವಿವರಿಸಿದೆಯೆಂದೂ, ಈ ಮೂರನೆಯ ಸೂತ್ರದಲ್ಲಿ ಅದಕ್ಕೆ ಪ್ರಮಾಣವನ್ನು ಹೇಳಿದೆಯೆಂದೂ ಅರಿಯಬೇಕು.

## ೪. ಸಮನ್ವಯಾಧಿಕರಣ

ತತ್ತು ಸಮನ್ವಯಾತ್ ॥ ೪ ॥

೪. ಆದರೆ (ವೇದಾಂತಶಾಸ್ತ್ರಗಳಿಗೆ ಬ್ರಹ್ಮದಲ್ಲೇ) ತಾತ್ಪರ್ಯವಿರುವುದರಿಂದ ಆ ಬ್ರಹ್ಮವು (ಅವುಗಳಿಂದಲೇ ತಿಳಿದುಬರುತ್ತದೆ).

**ಪೂರ್ವಾಧಿಕರಣೇ ಬ್ರಹ್ಮಣಃ ಶಾಸ್ತ್ರಯೋನಿತ್ವಮ್ ಉಕ್ತಮ್। ಇದಾನೀಂ ತದಾಕ್ಷಿಪ್ಯ ಪರಿಹರತಿ ತದಿತಿ ॥**

ಹಿಂದಿನ ಅಧಿಕರಣದಲ್ಲಿ ಬ್ರಹ್ಮವು ಶಾಸ್ತ್ರಗಳಿಂದಲೇ ತಿಳಿದು ಬರತಕ್ಕದ್ದು ಎಂದು ಹೇಳಲಾಯಿತು. ಈಗ ಅದನ್ನು ಆಕ್ಷೇಪಿಸಿ (ಆದರೆ) 'ಅದು' (ಎಂಬ ಪದದ ಮೂಲಕ) ಪರಿಹರಿಸುತ್ತಾರೆ.

**ಬ್ರಹ್ಮ ನ ಶಾಸ್ತ್ರಯೋನಿ । ಪರಿನಿಷ್ಠಿತತ್ವಾದ್ ಬ್ರಹ್ಮಣಃ ಪ್ರತ್ಯಕ್ಷ-ಅನುಮಾನಾಭ್ಯಾಮಪಿ ತದವಗಮ್ಯತೇ । ಶಾಸ್ತ್ರಸ್ಯ ಕ್ರಿಯಾರ್ಥತ್ವಾತ್ ಕರ್ಮಣ್ಯೇವ ತತ್ಸಮನ್ವಿತಮ್ । ನ ಬ್ರಹ್ಮಣಿ । ಯದಿ ಶಾಸ್ತ್ರಂ ಪ್ರಮಾಣಾಂತರಸಿದ್ಧ-ಬ್ರಹ್ಮೈವ ಅನುವದತಿ ತದಾ ತಸ್ಯ ಆನರ್ಥಕ್ಯಂ ಸ್ಯಾತ್ । ತದ್ವಾರಣಾಯ ಶಾಸ್ತ್ರಗತಬ್ರಹ್ಮೋಪದೇಶೋಽಪಿ ಕ್ರಿಯಾಂಗತ್ವೇನೈವ ಯೋಜಯಿತವ್ಯಃ ಇತಿ ಪ್ರಾಪ್ತೇ ತನ್ನಿರಾಕ್ರಿಯತೇ ಸೂತ್ರಸ್ಥ-'ತು'ಶಬ್ದೇನ ॥**

(ಆಕ್ಷೇಪ:) ಬ್ರಹ್ಮವು ಶಾಸ್ತ್ರಯೋನಿಯಲ್ಲ. ಬ್ರಹ್ಮವು ಈಗಾಗಲೇ ಇರುವ ವಸ್ತುವಾದುದರಿಂದ ಪ್ರತ್ಯಕ್ಷ ಮತ್ತು ಅನುಮಾನ ಪ್ರಮಾಣಗಳಿಂದಲೂ ತಿಳಿದುಬರುತ್ತದೆ. ಶಾಸ್ತ್ರದ ಉದ್ದಿಶ್ಯ (ಯಾಗಾದಿ) ಕರ್ಮಗಳಿಗೆ ಸಂಬಂಧಿಸಿದ ಕ್ರಿಯೆಯೇ ಆದುದರಿಂದ ಅದು ಕರ್ಮದಲ್ಲಿಯೇ ತಾತ್ಪರ್ಯವನ್ನು ಹೊಂದಿದೆ, ಬ್ರಹ್ಮದಲ್ಲಿ ಅಲ್ಲ. ಶಾಸ್ತ್ರವು ಒಂದು ವೇಳೆ ಬೇರೆ ಪ್ರಮಾಣಗಳಿಂದ ಸಿದ್ಧವಾಗುವ ಬ್ರಹ್ಮವನ್ನೇ ಕುರಿತು ಮತ್ತೆ ಹೇಳುತ್ತಿದ್ದರೆ ಅದು ನಿರರ್ಥಕ. ಇಂಥ ಸಂದರ್ಭವನ್ನು ನಿವಾರಿಸಲು ಶಾಸ್ತ್ರದಲ್ಲಿ ಬರುವ ಬ್ರಹ್ಮವಿಷಯಕವಾದ ಉಪದೇಶವನ್ನೂ (ಯಾಗಾದಿ) ಕರ್ಮಗಳ ಅಂಗವಾಗಿ ಬಂದಿದೆಯೆಂದೇ (ತಿಳಿದು) ಹೊಂದಿಸಬೇಕು!

ಇಂತಹ ಆಕ್ಷೇಪವು ಬಂದರೆ ಸೂತ್ರದಲ್ಲಿರುವ ತು(=ಆದರೆ) ಎಂಬ ಪದವು ಅದನ್ನು ನಿರಾಕರಿಸುತ್ತದೆ.

**ತಜ್ಜಗತ್ಕಾರಣಂ ಬ್ರಹ್ಮ ಪರಿನಿಷ್ಠಿತವಸ್ತು ಅಪಿ ವೇದಾಂತಶಾಸ್ತ್ರಾದೇವ ಅವಗಮ್ಯತೇ । ಕುತಃ ? ಸಮನ್ವಯಾತ್ । ಸರ್ವವೇದಾಂತವಾಕ್ಯಾನಿ ತಾತ್ಪರ್ಯೇಣ ಬ್ರಹ್ಮೈವ ಅವಗಮಯಂತಿ ನಾನ್ಯತ್ ಕಿಂಚಿದ್ವಸ್ತು । ಯದುಕ್ತಂ ಬ್ರಹ್ಮಣಃ ಪರಿನಿಷ್ಠಿತತ್ವಾತ್ ಪ್ರತ್ಯಕ್ಷಾನುಮಾನಾಭ್ಯಾಮಪಿ ತದ್ ಜ್ಞಾಯತ ಇತಿ ತನ್ನ; ಸೌಕ್ಷ್ಮ್ಯಾತ್ ತತ್ ನೇಂದ್ರಿಯ–ಗೋಚರಮ್ । ಲಿಂಗಾಭಾವಾತ್ ನಾಪ್ಯನುಮಾನಗಮ್ಯಮ್। ಕಿಂತು 'ತತ್ತ್ವಮಸಿ' (ಛಾಂದೋಗ್ಯೋಪನಿಷತ್ ೬.೮.೭), 'ಅಹಂ ಬ್ರಹ್ಮಾಸ್ಮಿ' (ಬೃಹದಾರಣ್ಯಕೋಪನಿಷತ್ ೧.೪.೧೦) ಇತ್ಯಾದಿ ಶ್ರುತೇಃ ಶಾಸ್ತ್ರಾದೇವ ಅವಗಮ್ಯತ ಇತಿ ಸ್ಫುಟಮ್ ॥**

ಜಗತ್ಕಾರಣವಾಗಿರುವ ಆ ಬ್ರಹ್ಮವು ಈಗಾಗಲೇ ಇರುವ ವಸ್ತುವಾಗಿದ್ದರೂ ವೇದಾಂತಶಾಸ್ತ್ರದಿಂದಲೇ ತಿಳಿದುಬರುತ್ತದೆ. ಯಾವ ಕಾರಣದಿಂದ? ಎಂದರೆ ಸಮನ್ವಯವಿರುವುದರಿಂದ. ಎಲ್ಲ ವೇದಾಂತವಾಕ್ಯಗಳೂ ಒಟ್ಟಿನಲ್ಲಿ ಬ್ರಹ್ಮವನ್ನೇ ತಿಳಿಸಿಕೊಡುತ್ತವೆಯಲ್ಲದೆ ಮತ್ತಾವ ವಸ್ತುವನ್ನೂ ಅಲ್ಲ. ಬ್ರಹ್ಮವು ಈಗಾಗಲೇ ಅಸ್ತಿತ್ವದಲ್ಲಿರುವ ವಸ್ತುವಾದುದರಿಂದ ಪ್ರತ್ಯಕ್ಷ–ಅನುಮಾನಗಳಿಂದಲೂ ಅದನ್ನು ತಿಳಿಯಬಹುದು ಎಂದು ಹೇಳಲಾಗಿದೆಯಷ್ಟೆ. ಅದು ಸರಿಯಲ್ಲ; ಏಕೆಂದರೆ ಅತ್ಯಂತ ಸೂಕ್ಷ್ಮವಾಗಿರುವುದರಿಂದ ಅದು ಇಂದ್ರಿಯ ಗೋಚರವಲ್ಲ. (ಬಾಹ್ಯಗೋಚರವಾದ) ಲಕ್ಷಣಗಳಾವುವೂ ಇಲ್ಲದ್ದರಿಂದ ಅನುಮಾನ ಪ್ರಮಾಣಕ್ಕೂ ಸಿಲುಕುವುದಿಲ್ಲ. ಆದರೆ 'ಅದು ನೀನೇ ಆಗಿರುವೆ' (ಛಾಂದೋಗ್ಯೋಪನಿಷತ್, ೬.೮.೭), 'ನಾನು ಬ್ರಹ್ಮವೇ ಆಗಿದ್ದೇನೆ' (ಬೃಹದಾರಣ್ಯಕೋಪನಿಷತ್ ೧.೪.೧೦) ಇತ್ಯಾದಿ ಶ್ರುತಿವಾಕ್ಯಗಳಿಂದ ಶಾಸ್ತ್ರದ ಮೂಲಕವೇ ಅದು ತಿಳಿದುಬರುತ್ತದೆ ಎಂಬುದು ಸ್ಪಷ್ಟವಾಯಿತು.

**ಯತ್ತು ಉಕ್ತಂ ಶಾಸ್ತ್ರಸ್ಯ ಕ್ರಿಯಾರ್ಥತ್ವಾತ್ ತದ್ಗತಬ್ರಹ್ಮೋಪದೇಶೋಽಪಿ ಕರ್ಮಾಂಗತ್ವೇನೈವ ಯೋಜಯಿತವ್ಯಃ ಇತಿ ತತ್ರ ವದಾಮಃ – ದ್ವಿರೂಪಂ ಹಿ ಶಾಸ್ತ್ರಮ್, ಕರ್ಮಕಾಂಡತ್ವ–ಜ್ಞಾನ–ಕಾಂಡತ್ವಾಭ್ಯಾಮ್ । ತತ್ರ ಕರ್ಮಕಾಂಡರೂಪಂ ಶಾಸ್ತ್ರಂ ಬಾಢಂ ಕರ್ಮಣಿ ಏವ ಸಮನ್ವಿತಮ್ । ನ ತು ಅನ್ಯತರತ್। ತತ್ತು ಸರ್ವಜ್ಞೇ ಸರ್ವಶಕ್ತೌ ನ ಕರ್ಮಾಂಗತ್ವೇನ ಯೋಜಯಿತವ್ಯಾನಿ॥**

"ಶಾಸ್ತ್ರವು (ಯಾಗಾದಿ) ಕರ್ಮಗಳಿಗೋಸ್ಕರವೇ ಇರುತ್ತದೆ, ಅದುದರಿಂದ ಅದರಲ್ಲಿ ಬರುವ, ಬ್ರಹ್ಮವನ್ನು ಕುರಿತ ಉಪದೇಶವನ್ನು ಕೂಡ ಕರ್ಮಗಳಿಗೆ ಅಂಗವಾಗಿಯೇ ಬಂದಿದೆಯೆಂದು (ತಿಳಿದು) ಸೇರಿಸಿಕೊಳ್ಳಬೇಕು"—ಎಂದು ಯಾವ (ಸಮಾಧಾನವನ್ನು) ಹೇಳಲಾಯಿತೋ ಆ ವಿಷಯದಲ್ಲಿ ಹೀಗೆ (ಉತ್ತರವನ್ನು) ಹೇಳುತ್ತೇವೆ: ಶಾಸ್ತ್ರವು ಕರ್ಮಕಾಂಡ ಮತ್ತು ಜ್ಞಾನಕಾಂಡ ಎಂದು ಎರಡು ಬಗೆಯಾಗಿದೆ. ಅದರಲ್ಲಿ ಕರ್ಮಕಾಂಡ ರೂಪದ ಶಾಸ್ತ್ರವು ಕರ್ಮದಲ್ಲಿಯೇ ತಾತ್ಪರ್ಯವನ್ನು ಹೊಂದಿರುತ್ತದೆ ಎಂಬುದು ಸರಿಯೇ. ಆದರೆ ಮತ್ತೊಂದಲ್ಲ. ಅದಾದರೋ—ಎಂದರೆ ಜ್ಞಾನಕಾಂಡರೂಪದ ಶಾಸ್ತ್ರ—ಸರ್ವಜ್ಞವೂ ಸರ್ವಶಕ್ತವೂ ಜಗತ್ಕಾರಣವೂ ಆದ ಬ್ರಹ್ಮದಲ್ಲಿಯೇ ತಾತ್ಪರ್ಯವನ್ನು ಹೊಂದಿದೆ. ಆದುದರಿಂದ ಬ್ರಹ್ಮವನ್ನು ಕುರಿತ ಉಪದೇಶ ವಾಕ್ಯಗಳನ್ನು (ಯಾಗಾದಿ ವೈದಿಕ) ಕರ್ಮಗಳಿಗೆ ಅಂಗವೆಂದು (ಭಾವಿಸಿ) ಅರ್ಥೈಸಬಾರದು.

**ಅತೋ ಬ್ರಹ್ಮಣಿ ಸಮನ್ವಯಾತ್ ಯಚ್ಛಾಸ್ತ್ರಂ ತತ್ರೈಕಮಾತ್ರ ಪ್ರಮಾಣಂ ತದ್ವೇದಾಂತಶಾಸ್ತ್ರಂ ಗುರೂಪಸದನಾದಿಪೂರ್ವಕಂ ಜ್ಞಾತ್ವಾ ಬ್ರಹ್ಮಾತ್ಮಭಾವಂ ಸಂಪ್ರಾಪ್ಯ ದುಃಖಮೂಲಂ ಸಂಸಾರಂ ತೀರ್ತ್ವಾ ಶಾಶ್ವತಸುಖಂ ಲಭೇತ ಮುಮುಕ್ಷುಃ ಇತಿ ಸಿದ್ಧಂ ಭವತಿ॥**

ಆದುದರಿಂದ ಯಾವ ಶಾಸ್ತ್ರವು ಬ್ರಹ್ಮದಲ್ಲಿ ತಾತ್ಪರ್ಯವುಳ್ಳದ್ದೋ, ಅದರ ವಿಷಯದಲ್ಲಿ ಏಕಮಾತ್ರ ಪ್ರಮಾಣವೋ ಆ ವೇದಾಂತಶಾಸ್ತ್ರವನ್ನು, ಗುರುವನ್ನು, ಬಳಿಸಾರುವುದೇ ಮೊದಲಾದ (ಸಾಧನಗಳಿಂದ) ಅರಿತುಕೊಂಡು 'ನನ್ನ ಆತ್ಮವು ಬ್ರಹ್ಮವೇ' ಎಂಬ ಅನುಭವವನ್ನು ಹೊಂದಿ, ದುಃಖಗಳಿಗೆ ಮೂಲವಾದ ಸಂಸಾರವನ್ನು ದಾಟಿ, ಶಾಶ್ವತಸುಖವನ್ನು ಮುಮುಕ್ಷುವಾದವನು ಪಡೆಯಬೇಕು ಎಂದು ಸಿದ್ಧವಾಗುತ್ತದೆ.

**ಅಥ ನಿಗಮನಮ್ । ಬ್ರಹ್ಮಜ್ಞಾನಾದೇವ ಮೋಕ್ಷಸ್ಯ ಸಾಧ್ಯತ್ವಾತ್ ತಜ್ಜಿಜ್ಞಾಸಾ ಕರ್ತವ್ಯಾ ಇತಿ ಪ್ರಥಮಸೂತ್ರೇ। ಜಿಜ್ಞಾಸಿತವ್ಯಸ್ಯ ಬ್ರಹ್ಮಣಃ ಲಕ್ಷಣಂ ನಿರೂಪಿತಂ ದ್ವಿತೀಯೇ । ಬ್ರಹ್ಮಜ್ಞಾನಾರ್ಥಂ ವೇದಾಂತಶಾಸ್ತ್ರಮೇವ ಆಶ್ರಯಣೀಯಂ ಯತಃ ತಸ್ಮಾದೇವ ತಜ್ಜ್ಞಾನಂ ಭವತಿ ಇತಿ ತೃತೀಯೇ । ಅಪಿ ಚ ಸರ್ವಂ ವೇದಾಂತಶಾಸ್ತ್ರಂ ಬ್ರಹ್ಮಣಿ ಏವ ತಾತ್ಪರ್ಯೇಣ ಸಮನ್ವಿತಮಿತಿ ತದೇವ ಪ್ರತಿಷ್ಠಾಪಿತಮ್ ಚತುರ್ಥೇ ॥**

**ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಮ್ ।**
**ಪಾದಪದ್ಮೇ ತಯೋಃ ಶ್ರಿತ್ವಾ ಪ್ರಣಮಾಮಿ ಮುಹುರ್ಮುಹುಃ ॥**

ಈಗ ಉಪಸಂಹಾರ. ಬ್ರಹ್ಮಜ್ಞಾನದಿಂದಲೇ ಮೋಕ್ಷವು ಸಾಧ್ಯವಾದುದರಿಂದ ಬ್ರಹ್ಮಜಿಜ್ಞಾಸೆಯು ಕರ್ತವ್ಯವೆಂಬುದನ್ನು ಪ್ರಥಮ ಸೂತ್ರದಲ್ಲಿ ಹೇಳಿದೆ. ಎರಡನೆಯ ಸೂತ್ರದಲ್ಲಿ ಜಿಜ್ಞಾಸೆ ಮಾಡಬೇಕಾದ ಬ್ರಹ್ಮದ ಲಕ್ಷಣವನ್ನು ಹೇಳಿದೆ. ವೇದಾಂತಶಾಸ್ತ್ರದಿಂದಲೇ ಬ್ರಹ್ಮಜ್ಞಾನವುಂಟಾಗುವುದರಿಂದ, ಬ್ರಹ್ಮಜ್ಞಾನಕ್ಕಾಗಿ ಆ ಶಾಸ್ತ್ರವನ್ನೇ ಆಶ್ರಯಿಸಬೇಕೆಂದು ಮೂರನೆಯ ಸೂತ್ರದ ಒಟ್ಟು ಅಭಿಪ್ರಾಯ. ಮತ್ತು, ಎಲ್ಲ ವೇದಾಂತವಾಕ್ಯಗಳೂ ತಾತ್ಪರ್ಯದಿಂದ ಬ್ರಹ್ಮವನ್ನೇ ಹೇಳುತ್ತಿರುವುದರಿಂದ ನಾಲ್ಕನೆಯ ಸೂತ್ರದಲ್ಲಿ ಅದನ್ನೇ ಪ್ರತಿಷ್ಠಾಪಿಸಲಾಗಿದೆ.

ಶಂಕರಾಚಾರ್ಯರೂಪಿಯಾದ ಶಂಕರ, ಬಾದರಾಯಣರೂಪಿಯಾದ ಕೇಶವ—ಇವರುಗಳ ಪಾದಪದ್ಮವನ್ನು ಆಶ್ರಯಿಸಿ ಮತ್ತೆ ಮತ್ತೆ ನಮಸ್ಕರಿಸುತ್ತೇನೆ.

**ಚತುಸ್ಸೂತ್ರೀವಿವರಣಂ ಸಮಾಪ್ತಮ್ ॥**